೧-೦೦ ಪಿ.ಎಂ.

೭) ಅಲಸಂದಿ ಬೀಜೋತ್ಪಾದಕರನ್ನು ''ಕಪ್ಪು ಪಟ್ಟಿ'' ಯಲ್ಲಿಟ್ಟಿರುವುದು,

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—೧೯೬೬ರಲ್ಲಿ ಅಲಸಂದಿ ಹಾಗೂ ಜೋಳದ ಬೀಜೋತ್ಪಾದಕರನ್ನು ''ಕಪ್ಪು ಪಟ್ಟಿ'' ಯಲ್ಲಿ ಸೇರಿಸಿ ಮರ್ಯಾದೆಯನ್ನು ತೆಗೆದಿರುವರು. ಅಲಸಂದಿ ಬೀಜೋತ್ಪಾದನೆಯ ಬೆಳೆಯ ಸಮೀಕ್ಷೆಯನ್ನು ತಮ್ಮ ಇಲಾಖೆಯ ಅಂದರೆ ಬೀಜ ನಿಗಮದ ಅಧಿಕಾರಿಗಳು ರೈತರ ಪ್ಲಾಟುಗಳಿಗೆ ಇಣಿಕಿ ಕೂಡ ನೋಡದೆ ಇಳುವರಿಯನ್ನೂ ಸಮೀಕ್ಷೆಯ ನೋಡದೇ ಬೀಜ ಮೊಳಕೆಯೊಡೆದು, ಹಸಿರು ಗಟ್ಟಿ ನಿಂತಾಗ ಮುಂದೆ ಫಲ ಬರುವುದೆಂದು ಗಣಿತ ಹಾಕಿರುವುದು ನೀಜವಾಬ್ದಾರಿತನದ ಪರಮಾವಧಿಯಾಗಿದೆ. ಸತ್ಯ ಸಂಗತಿ ಅಲಸಂದಿಯು ಹುಟ್ಟುವಾಗ ಸರಿ ಇತ್ತು. ಮುಂದೆ ನೀರು ಬಿದ್ದು ಬೂದು ರೋಗ ಬಡಿದು ಹೊಳ್ಳಾಯಿತು. ಇದು ವಾಸ್ತವ ಚಿತ್ರ. ಹೀಗಿದ್ದೂ ಅಲಸಂದಿ ಬೀಜೋತ್ಪಾದಕರನ್ನು ''ಕಪ್ಪು ಪಟ್ಟಿಯಲ್ಲಿ'' ಇಡುವುದು ಸರಿಯಲ್ಲ. ಬೇಜವಾಬ್ದಾರಿ ಅಧಿಕಾರಿಗಳನ್ನು ''ಕಪ್ಪು ಪಟ್ಟಿ'' ಯಲ್ಲಿ ಇಡಿ. ಈಗ ಕಪ್ಪು ಪಟ್ಟಿಯಲ್ಲಿರುವ ಬೀಜೋತ್ಪಾದಕರಿಗೆ ಬೀಜ ನಿಗಮದ ಸೌಲಭ್ಯಗಳು ಸಿಗುವುದಿಲ್ಲ. ಆದ್ದರಿಂದ ಇವರಿಗೂ ಬೀಜ ನಿಗಮದ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕು. ಬೀಜೋತ್ಪಾದಕರು ಭಯೋತ್ಪಾದಕರಾಗದಂತೆ ಎಚ್ಚರಿಕೆ ವಹಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್,—ಸನ್ಮಾನ್ಯ ಅಧ್ಯಕ್ಷರೆ, ''ಬೀಜೋತ್ಪಾದಕರು ಭಯೋತ್ಪಾದಕರಾಗದಂತೆ ಎಚ್ಚರಿಕೆ ವಹಿಸಬೇಕು'' ಎಂದಿದ್ದಾರೆ. ಸನ್ಮಾನ್ಯ ಜ್ಞಾನದೇವ ದೊಡ್ಡಮೇಟಿಯವರ ಕನ್ನಡ ಭಾಷೆ ಪ್ರಾಸಬದ್ಧವಾಗಿದೆ. ಕರ್ನಾಟಕ ರಾಜ್ಯ ಬೀಜ ನಿಗಮವು ವಿವಿಧ ಬೆಳೆಗಳ ಬೀಜೋತ್ಪಾದನೆಯನ್ನು ಮಾಡುವ ಉದ್ದೇಶದಿಂದ ರಾಜ್ಯದಲ್ಲಿ ಬೀಜೋತ್ಪಾದನಾ ರೈತರನ್ನು ಗುರುತಿಸಿ ಅವರ ಮುಖಾಂತರ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ, ಈ ಉದ್ದೇಶಕ್ಕಾಗಿ ನಿಗಮದ ಕೆಲವು ನಿಬಂಧನೆಗಳನ್ನು ಹಾಕಿಕೊಂಡಿರುತ್ತದೆ. ಅದರಂತೆ ಬೀಜೋತ್ಪಾದಕರಿಗೆ ಗುರಿಯನ್ನು ನಿಗದಿಪಡಿಸಿ ಅದರ ಪ್ರಕಾರ ಅವರಿಂದ ಬೀಜವನ್ನು ನಿಗಮಕ್ಕೆ ಕೊಡಬೇಕೆಂಬ ಷರತ್ತನ್ನು ಹಾಕಿಕೊಂಡಿರುತ್ತದೆ. ಈ ಷರತ್ತಿನ ಪ್ರಕಾರ ಯಾವ ರೈತರು ಬೀಜವನ್ನು ನಿಗಮಕ್ಕೆ ಕೊಡುವಲ್ಲಿ ವಿಫಲರಾಗುವರೋ ಅಂಥವರನ್ನು ''ಕಪ್ಪು ಪಟ್ಟಿ''ಯಲ್ಲಿ ಸೇರಿಸಿ ಮುಂದಿನ ಕೆಲವಾರು ವರ್ಷಗಳ ಪುನಃ ಬೀಜೋತ್ಪಾದನಾ ಕಾರ್ಯಕ್ರಮವನ್ನು ಕೊಡುವುದಿಲ್ಲ. ಈ ಉದ್ದೇಶ ನಿಗಮವು ಹಾಕಿಕೊಂಡಿರುವ ಗುರಿಯಂತೆ ಬೀಜವನ್ನು ಸಂಗ್ರಹಿಸುವುದೇ ಒಂದು ಮೂಲ ಉದ್ದೇಶವಾಗಿರುತ್ತದೆ. ಮತ್ತು ಬೀಜೋತ್ಪಾದಕ ರೈತರಿಗೆ ಸಾಕಷ್ಟು ಎಚ್ಚರಿಕೆಯನ್ನು ನೀಡಿ ಬೀಜೋತ್ಪಾದಕ ರೈತರಲ್ಲಿ ಶಿಸ್ತನ್ನು ಮೂಡಿಸುವುದೇ ಮುಖ್ಯ ಉದ್ದೇಶವಾಗಿರುತ್ತದೆ.

ಇದರ ಪ್ರಕಾರ ೧೯೬೬ನೇ ಇಸವಿಯಲ್ಲಿ ರೋಣ ತಾಲ್ಲೂಕಿನಲ್ಲಿ ಅಲಸಂದೆ, ಮುಸುಕಿನ ಜೋಳ ಮತ್ತು ಸಂಕರಣ ಜೋಳದ ಬೀಜೋತ್ಪಾದನೆಯ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಇದರಲ್ಲಿ ಒಟ್ಟು ೭೯ ರೈತರು ಬೀಜೋತ್ಪಾದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರ ಪೈಕಿ ೩೪ ರೈತರು ನಿಗದಿಪಡಿಸಿದ ಗುರಿಯಂತೆ ಬೀಜವನ್ನು ನಿಗಮಕ್ಕೆ ಒದಗಿಸಿರುತ್ತಾರೆ. ಇದಲ್ಲದೆ ೫ ಜನ ಬೀಜೋತ್ಪಾದಕರ ತಾಕುಗಳನ್ನು ಕೆಲವು ತಾಂತ್ರಿಕ ಕಾರಣಗಳಿಂದ ತಿರಸ್ಕೃತ ಮಾಡಲಾಗಿರುತ್ತದೆ. ಆದರೆ ಇವರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿರುವುದಿಲ್ಲ. ಇನ್ನು ಉಳಿದ ರೈತರುಗಳು ಉತ್ಪಾದಿಸಿದ ಬೀಜವನ್ನು ನಿಗಮಕ್ಕೆ ಕೊಟ್ಟಿರುವುದಿಲ್ಲ. ಇದರಿಂದಾಗಿ ನಿಗಮವು ೧೯೬೬ನೇ ಸಾಲಿನಲ್ಲಿ ೨,೧೦,೯೫೦ ರೂಪಾಯಿಗಳಷ್ಟು ನಷ್ಟವಾಗಿ ಕಡಿಮೆಯಾಗಿರುತ್ತದೆ. ಈ ಕಾರಣದಿಂದ ಇಂತಹ ರೈತರನ್ನು 'ಕಪ್ಪು ಪಟ್ಟಿ'ಯಲ್ಲಿ ಸೇರಿಸಲಾಗಿರುತ್ತದೆ.

ಈ ಮೇಲೆ ಹೇಳಿರುವ ಅಂಶಗಳಿಂದ ನಿಗಮದ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸಿ, ಈ ಬೀಜೋತ್ಪಾದಕರನ್ನು 'ಕಪ್ಪು ಪಟ್ಟಿ'ಯಲ್ಲಿ ಸೇರಿಸಿ ಅವರ ಮರ್ಯಾದೆಯನ್ನು ತೆಗೆದಿರುವುದಾಗಿ ಮಾಡಿರುವ ಆಕ್ಷೇಪಣೆಯು ಸರಿಯಾಗಿರುವುದಿಲ್ಲ.